ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ರಾಜ್ಯಾದ್ಯಂತ ಈವರೆಗೆ 18,663 ಮಂದಿ ಅಶಕ್ತ ಸಾಹಿತಿ/ಕಲಾವಿದರು ಮಾಸಾಶನ ಸೌಲಭ್ಯ ಪಡೆಯುತ್ತಿದ್ದಾರೆ.

ಆ) ಸರ್ಕಾರದ ಆದೇಶ ಸಂಖ್ಯೆ: ಕಸಂವಾ:03ಕಗೌದ:2013 ದಿ:22.05.2014 ರಂತೆ 1603 ಮಂದಿ ಸಾಹಿತಿ/ಕಲಾವಿದರಿಗೆ ಮಾಸಾಶನ ಮಂಜೂರು ಮಾಡಲಾಗಿದೆ.

ಇ) ಪ್ರಸ್ತುತ ಮಾಹೆಯಾನ ₹ 1,000/–ಗಳ ಮಾಸಾಶನ ನೀಡಲಾಗುತ್ತಿದ್ದು, ಸದರಿ ಮಾಸಾಶನದ ಮೊತ್ತವನ್ನು ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜೀವ್ ಗಾಂಧಿ ಸೇವಾ ಕೇಂದ್ರಗಳ ಸ್ಥಾಪನೆ

2574(2315); ಡಾ॥ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್)

ಅ) ಗ್ರಾಮೀಣಾಭಿವೃದ್ಧಿ ಇಲಾಖೆಯ ವತಿಯಿಂದ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಸೌಲಭ್ಯಗಳ ವಿಸ್ತರಣೆಗೆ ರಾಜೀವ್ ಗಾಂಧಿ ಸೇವಾ ಕೇಂದ್ರಗಳನ್ನು ಸ್ಥಾಪನೆ ಮಾಡಲು ಉದ್ದೇಶಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ವಿವಿಧ ಜಿಲ್ಲೆಗಳಲ್ಲಿ ಇಂತಹ ಎಷ್ಟು ಕೇಂದ್ರಗಳನ್ನು ಸ್ಥಾಪಿಸಲಾಗುವುದು, ಇದಕ್ಕಾಗಿ ಆಯವ್ಯಯದಲ್ಲಿ ಎಷ್ಟು ಹಣವನ್ನು ಮೀಸಲಿಡಲಾಗಿದೆ, ಇಲ್ಲಿಯವರೆವಿಗೆ ಪ್ರತಿ ಜಿಲ್ಲೆಗೆ ಬಿಡುಗಡೆ ಮಾಡಿರುವ ಮತ್ತು ಖರ್ಚಾಗಿರುವ ಹಣ ಎಷ್ಟು (ಜಿಲ್ಲಾ ಪಂಚಾಯ್ತಿವಾರು ವಿವರ ಒದಗಿಸುವುದು)

ಇ) ಬೀದರ್ ಜಿಲ್ಲೆಯ ವಿಧಾನಸಭಾ ಕ್ಷೇತ್ರದ ಯಾವ ಯಾವ ಸ್ಥಳಗಳಲ್ಲಿ ಈ ಕೇಂದ್ರಗಳನ್ನು ಸ್ಥಾಪಿಸಲಾಗುವುದು, ಇಲ್ಲಿಯವರೆವಿಗೂ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ ಮತ್ತು ಎಷ್ಟು ಅಪೂರ್ಣವಾಗಿವೆ; ಇದಕ್ಕಾಗಿ ವೆಚ್ಚ ಮಾಡುತ್ತಿರುವ ಹಣ ಎಷ್ಟು (ಬೀದರ್ ಜಿಲ್ಲೆಯಲ್ಲಿ ಸ್ಥಾಪಿಸಲಾಗುತ್ತಿರುವ ಪ್ರತಿ ಕೇಂದ್ರದ ಬಗ್ಗೆ ಪ್ರತ್ಯೇಕ ವಿವರ ಒದಗಿಸುವುದು?

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಹೌದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಸೌಲಭ್ಯಗಳ ವಿಸ್ತರಣೆಗೆ ರಾಜೀವ್ ಗಾಂಧಿ ಸೇವಾ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗುತ್ತಿದೆ.

ಆ)

- ಈ ಯೋಜನೆಯಡಿ ಎಲ್ಲಾ ಜಿಲ್ಲೆಗಳಲ್ಲಿ ಒಟ್ಟಾರೆಯಾಗಿ 3155 ರಾಜೀವ್ ಗಾಂಧಿ ಸೇವಾ ಕೇಂದ್ರಗಳನ್ನು ಅನುಷ್ಠಾನಗೊಳಿಸಲು ಗುರಿ ಹೊಂದಲಾಗಿದೆ ಈ ಕಾಮಗಾರಿಗಳಿಗೆ ಪ್ರತ್ಯೇಕವಾಗಿ ಹಣವನ್ನು ಮೀಸಲಿಡಲಾಗುವುದಿಲ್ಲ ಒಟ್ಟಾರೆಯಾಗಿ ಪ್ರಸಕ್ತ 2014–15ನೇ ಸಾಲಿನಲ್ಲಿ ಈ ಯೋಜನೆಗೆ ₹ 3151.76 ಕೋಟಿ ಕಾರ್ಮಿಕ ಆಯವ್ಯಯವನ್ನು ನಿಗಧಿಪಡಿಸಲಾಗಿದೆ.
- ಪ್ರಸಕ್ತ ಸಾಲಿನಲ್ಲಿ ಪ್ರತಿ ಜಿಲ್ಲೆಗೆ ಬಿಡುಗಡೆ ಮಾಡಿರುವ ಮತ್ತು ಖರ್ಚಾಗಿರುವ ಹಣದ ವಿವರಗಳನ್ನು ಹಾಗೂ ರಾಜೀವ್ ಗಾಂಧಿ ಸೇವಾ ಕೇಂದ್ರಗಳ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಇ) ಬೀದರ್ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಅನುಷ್ಠಾನ ಮಾಡಲಾಗುತ್ತಿರುವ ರಾಜೀವ್ ಗಾಂಧಿ ಸೇವಾ ಕೇಂದ್ರಗಳ ವಿವರಗಳು ಈ ಕೆಳಕಂಡಂತಿದೆ.

ಕ್ರ.ಸಂ.	ವಿಧಾನಸಭಾ ಕ್ಷೇತ್ರ	ರಾಜೀವ್ ಗಾಂಧಿ ಸೇವಾ ಕೇಂದ್ರದ ಕಾಮಗಾರಿಗಳು		
		ಪೂರ್ಣಗೊಂಡ ಕಾಮಗಾರಿಗಳು	ಅಪೂರ್ಣಗೊಂಡ (ಚಾಲ್ತಿ) ಕಾಮಗಾರಿಗಳು	ಖರ್ಚು (₹ ಲಕ್ಷಗಳಲ್ಲಿ)
1	ಔರಾದ	2	29	127.50
2	ಬಸವಕಲ್ಯಾಣ	2	16	62.50
3	ಭಾಲ್ಕಿ	2	17	31.74
4	ಬೀದರ್ ಉತ್ತರ	2	8	10.47
5	ಬೀದರ್ ದಕ್ಷಿಣ	7	24	114.65
6	ಹುಮನಾಬಾದ್	7	21	131.61
ಒಟ್ಟು		**22**	**115**	**478.47**

ಅನುಬಂಧ

ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾದ ಮತ್ತು ಖರ್ಚಾದ ಅನುದಾನದ ಹಾಗೂ ರಾಜೀವ್ ಗಾಂಧಿ ಸೇವಾ ಕೇಂದ್ರಗಳ ವಿವರಗಳು

ಕ್ರ.ಸಂ.	ಜಿಲ್ಲೆ	2014-15 (₹ ಲಕ್ಷಗಳಲ್ಲಿ)		ಸ್ಥಾಪಿಸಲು ಗುರಿ ಹೊಂದಿರುವ ರಾಜೀವ್ ಗಾಂಧಿ ಸೇವಾ ಕೇಂದ್ರಗಳ ಸಂಖ್ಯೆ
		ಬಿಡುಗಡೆ	ಖರ್ಚು (MIS ಪ್ರಕಾರ)	
1	ಬಾಗಲಕೋಟೆ	2136.00	2056.17	137
2	ಬೆಂಗಳೂರು (ಗ್ರಾ)	550.00	551.50	82
3	ಬೆಂಗಳೂರು (ನಗರ)	–	14.36	38
4	ಬೆಳಗಾವಿ	2075.00	2166.57	113
5	ಬಳ್ಳಾರಿ	588.00	622.89	71
6	ಬೀದರ್	1306.00	1287.19	210

7	ಬಿಜಾಪುರ	2785.00	2706.73	64
8	ಚಾಮರಾಜನಗರ	1747.00	1718.48	155
9	ಚಿಕ್ಕಬಳ್ಳಾಪುರ	245.00	400.20	89
10	ಚಿಕ್ಕಮಗಳೂರು	829.00	881.08	73
11	ಚಿತ್ರದುರ್ಗ	2365.00	2343.64	50
12	ದಕ್ಷಿಣ ಕನ್ನಡ	136.00	124.41	238
13	ದಾವಣಗೆರೆ	3344.00	3368.04	128
14	ಧಾರವಾಡ	736.00	815.15	135
15	ಗದಗ	1334.00	1366.70	58
16	ಗುಲ್ಬರ್ಗ	3114.00	3147.36	57
17	ಹಾಸನ	2612.00	2556.80	281
18	ಹಾವೇರಿ	1013.00	1234.92	109
19	ಕೊಡಗು	320.00	296.87	64
20	ಕೋಲಾರ	2234.00	2149.88	92
21	ಕೊಪ್ಪಳ	1853.00	1957.83	133
22	ಮಂಡ್ಯ	2129.00	2163.71	85
23	ಮೈಸೂರು	2193.00	2179.52	167
24	ರಾಯಚೂರು	2212.00	2178.05	78
25	ರಾಮನಗರ	2808.00	2634.30	85
26	ಶಿವಮೊಗ್ಗ	1551.00	1590.87	85
27	ತುಮಕೂರು	471.00	459.21	101
28	ಉಡುಪಿ	154.00	54.26	41
29	ಉತ್ತರ ಕನ್ನಡ	952.00	1081.76	61
30	ಯಾದಗಿರಿ	8.00	327.18	75
ಒಟ್ಟು		**43800.00**	**44435.63**	**3155**